

# ಐಡೆಂಟಿಟಿ ತುಂಬ ಕಷ್ಟ

**ರಶ್ಮಿ ಎಚ್.ಎಂ.**

**ಉದಯದ 'ನಂದಿನಿ'ಯ ನೀಲಿ**

◆ **ಈ 'ನಂದಿನಿ'ಯಲ್ಲಿ ಬದಲಾವಣೆಗಳು ಏನಿವೆ?**

ಆಗ ಬಹುಭಾಷೆಯಲ್ಲಿ ಪ್ರಸಾರವಾಗುತ್ತಿತ್ತು. ಈಗ ಕನ್ನಡದಲ್ಲಿ ಮಾತ್ರ. ಇದನ್ನು ರಮೇಶ್ ಅರವಿಂದ್ ನಿರ್ಮಿಸುತ್ತಿದ್ದಾರೆ. ಕಥೆ ಮೂಲ ನೆಲೆಯನ್ನು ಇಟ್ಟುಕೊಂಡು ಭಿನ್ನ ಹಾದಿಯಲ್ಲಿ ಸಾಗುತ್ತಿದೆ. ಹೊಸ ಪಾತ್ರಗಳು ಸೃಷ್ಟಿಯಾಗಿವೆ. ಅದರಲ್ಲಿ ನನ್ನ ಪಾತ್ರವೂ ಒಂದು. ನಾಯಕ ವಿರಾಟ್‌ನ ಸೇರ್ಪಡೆಯಾಗಿದೆ. ದೇವಸೇನಾ ಇದ್ದಾಳೆ. ನಂದಿನಿ ಜನನಿಯಾಗಿ ದೊಡ್ಡವಳಾಗಿದ್ದಾಳೆ. ಆ ಪಾತ್ರವನ್ನು ನಿತ್ಯಾರಾಮ್ ಅವರೇ ಮಾಡುತ್ತಿದ್ದಾರೆ. ಕಥೆ ಹೇಗೆ ಹೋಗುತ್ತದೆ ಎನ್ನುವುದು ಈಗಲೇ ನಿರೀಕ್ಷೆ ಮಾಡಲು ಆಗುವುದಿಲ್ಲ. ನೀಲಿಗೆ ಜನನಿ ಕಂಡರೆ ಆಗುವುದಿಲ್ಲ. ಆಕೆಗೆ ತೊಂದರೆ ಕೊಡುವುದು ನೀಲಿಯ ಉದ್ದೇಶ.

◆ **ನಿಮ್ಮ ಕಂಚಿನ ಕಂಠವನ್ನು ದುಡಿಸಿಕೊಳ್ಳುವ ಯೋಚನೆ ಇದೆಯಾ?**

ಮಾಧ್ಯಮ ನನ್ನ ಕ್ಷೇತ್ರ ಅಲ್ಲ. ಆರೇಳು ವರ್ಷಗಳ ಕಾಲ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದೆ. ಮೂರು ವರ್ಷದಿಂದ ಉದಯ ಮ್ಯೂಸಿಕ್‌ನಲ್ಲಿ ಅರೆಕಾಲಿಕವಾಗಿ ಆ್ಯಂಕರ್ ಕೆಲಸ ಮಾಡುತ್ತಿದ್ದೇನೆ. ನನಗೆ ಅಭಿನಯಿಸುವ ಉದ್ದೇಶವೂ ಇರಲಿಲ್ಲ. ಸಾಫ್ಟ್‌ವೇರ್ ತಾಂತ್ರಿಕ ಕೆಲಸ ಏಕತಾನತೆ ಅನ್ನಿಸಿ ಅದನ್ನು ಬಿಡಬೇಕು ಅನ್ನಿಸಿತು, ಕಳೆದ ಜನವರಿಯಲ್ಲಿ ಬಿಟ್ಟೆ. ಅಷ್ಟರಲ್ಲಿ ರೇಡಿಯೊ ಜಾಕಿ ಆಗೋಣ ಅನ್ನಿಸಿತು ಪ್ರಯತ್ನಿಸಿದೆ. ಅವಕಾಶವೂ ಸಿಕ್ಕಿತು. ಧಾರಾವಾಹಿಯಲ್ಲಿ ಅಭಿನಯಕ್ಕೂ ಅದೇ ಹೊತ್ತಿಗೆ ಅವಕಾಶ ಒದಗಿ ಬಂದಿದ್ದರಿಂದ ಇದನ್ನು ಒಪ್ಪಿಕೊಂಡಿದ್ದೇನೆ. ಇದು ನನ್ನ ಮೊದಲ ಧಾರಾವಾಹಿ. ಈಗ ಅಭಿನಯ ಮತ್ತು ಆ್ಯಂಕರ್ ಎರಡನ್ನೂ ನಿರ್ವಹಿಸಿಕೊಂಡು ಹೋಗುತ್ತೇನೆ.

◆ **ಬಣ್ಣ ಹಚ್ಚಲು ಪ್ರೇರಣೆಯಾಗಿದ್ದು ಏನು?**

ಮಾಡೆಲಿಂಗ್– ಫ್ಯಾಷನ್ ಷೋ ಮಾಡುತ್ತಿದ್ದೆ. ಕ್ಯಾಮೆರಾ ಬಗ್ಗೆ ನನಗೆ ಭಯ ಅನ್ನೋದು ಯಾವುತ್ತೂ ಇರಲಿಲ್ಲ. ಕಾಲೇಜಿನ ಫ್ಯಾಷನ್ ಷೋ ಒಂದಕ್ಕೆ ರಿಜೆಕ್ಟ್ ಆಗಿದ್ದೆ. ಅದನ್ನು ಸವಾಲಾಗಿ ತೆಗೆದುಕೊಂಡೆ. ನಂತರ ಮಾಡೆಲಿಂಗ್ ಆರಂಭಿಸಿದೆ. ಎಂಜಿನಿಯರಿಂಗ್ ಜೊತೆ ಬೇರೆ ಏನಾದರೂ ಮಾಡೋಣ ಎಂದು ಈ ಕಡೆಗೆ ಬಂದೆ. ಇದಕ್ಕಾಗಿ ಬೇರೆ ಯಾವ ತರಬೇತಿ ಪಡೆದಿರಲಿಲ್ಲ.

◆ **ಕರಿಯರ್ ಡಿಸೈನ್ ಹೇಗೆ ಮಾಡಿಕೊಂಡಿದ್ದೀರಿ?**

ಸಿನಿಮಾ ಮಾಡಬೇಕು ಎನ್ನುವ ದೊಡ್ಡ ಆಸೆಯಂತೂ ಸದ್ಯಕ್ಕಿಲ್ಲ. ಸಿನಿಮಾಕ್ಕೆ ಅವಕಾಶ ಸಿಕ್ಕರೆ ಮಾಡುತ್ತೇನೆ. ಧಾರಾವಾಹಿಗಳನ್ನು ಮಾಡಬೇಕು, ಈ ಮಾಧ್ಯಮದ ತಂತ್ರಜ್ಞಾನದಲ್ಲಿ ಎಬಿಸಿಡಿ ಕೂಡ ಗೊತ್ತಿಲ್ಲ. ನಿರ್ದೇಶನ, ನಿರ್ಮಾಣ, ನಟನೆಯನ್ನು ಹೊಸದಾಗಿ ನೋಡುತ್ತಿದ್ದೇನೆ. ಸದ್ಯ ತೆರೆಯಲ್ಲಿ ಕಾಣಬೇಕು ಅನ್ನುವುದು ಅಷ್ಟೇ ನನ್ನ ಉದ್ದೇಶ. ಆರಂಭದಲ್ಲಿ ಹೊಸದು ಎನ್ನುವ ಕುತೂಹಲ ಇತ್ತು; ಭಯ ಇರಲಿಲ್ಲ. ನಮ್ಮ ತಂಡದಲ್ಲಿ ನನ್ನನ್ನು ತುಂಬ ಪ್ರೋತ್ಸಾಹಿಸುತ್ತಾರೆ.

◆ **ನಿಮಗೆ ಕಷ್ಟ ಅನ್ನುವುದು ಏನಿದೆ?**

ಹೇಳಬೇಕು ಅಂದರೆ ಬೆಳಿಗ್ಗೆ ಏಳುವುದು ತುಂಬ ತೊಂದರೆ ಅನ್ನಿಸುತ್ತದೆ. ರಾತ್ರಿಯೆಲ್ಲ ನಿದ್ರೆ ಮಾಡದೆ ಬೇಕಾದರೆ ಇರಬಲ್ಲೆ. ಅದು ನನಗೆ ಏನೂ ಅನ್ನಿಸುವುದಿಲ್ಲ. ಆದರೆ ಬೆಳಿಗ್ಗೆಯ ನಿದ್ದೆಯನ್ನು ತುಂಬ ಇಷ್ಟ. ಒಂದು ದಿನ ಶೂಟಿಂಗ್ ಇಲ್ಲ ಅಂದಾಗ ಬೆಳಿಗ್ಗೆ ಮತ್ತೆ ಕೊಂಚ ಮಲಗಿ ಎದ್ದರೆ ಮಜಾ ಅನ್ನಿಸುತ್ತದೆ. ಸಿಕ್ಕಾಪಟ್ಟೆ ಸೀರಿಯಲ್ ಬಿತ್ತರವಾಗುತ್ತಿವೆ. ಹೀಗಿರುವಾಗ ಎಲ್ಲರೂ ಎಲ್ಲ ಧಾರಾವಾಹಿ ನೋಡಲು ಸಾಧ್ಯವಿಲ್ಲ. ಒಬ್ಬೊಬ್ಬರು ತಮ್ಮಿಷ್ಟದ ಒಂದೆರಡು ಧಾರಾವಾಹಿ ನೋಡುತ್ತಾರೆ. ಅದರ ನಡುವೆ ಗುರುತಿಸಿಕೊಳ್ಳಬೇಕು. ಸಿನಿಮಾದಲ್ಲಿ ಹೇಗಿದೆಯೋ ನಾನರಿಯೆ. ಅಲ್ಲಿಯೂ ಇದೇ ರೀತಿ ಇರಬಹುದು. ಜನರು ಗುರುತಿಸುವಂತೆ ನಟಿಯಾಗಿ ಬೆಳೆಯುವ ಬಯಕೆಯ ಹಾದಿ ಸವೆಸುವುದೂ ಕಷ್ಟವೇ.

◆ **ನಿಮ್ಮ ಕುಟುಂಬವನ್ನು ಪರಿಚಯಿಸಿ..**

ಅಪ್ಪ ಮುರಳೀಧರ್ ಇನ್ಸೂರೆನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ಅಮ್ಮ ಶ್ರೀದೇವಿ ಬಿಎಸ್‌ಎನ್‌ಎಲ್‌ನಲ್ಲಿ ಇದ್ದಾರೆ ತಮ್ಮ ಕೂಡ ಎಂಜಿನಿಯರ್. ಮೈಸೂರಲ್ಲಿ ಹುಟ್ಟಿದ ನಾನು ಹದಿಹರೆಯಕ್ಕೆ ಬೆಂಗಳೂರಿಗೆ ಬಂದೆ. ಈಗ ನಮ್ಮ ಕುಟುಂಬ ಇಲ್ಲೇ ನೆಲೆಸಿದೆ. ಸಂಪ್ರದಾಯಸ್ಥರ ಕುಟುಂಬ ನಮ್ಮದು. ಮೊದಲು ಓದು ಎನ್ನುವ ಕಟ್ಟಳೆಯ ನಡುವೆ ಬೆಳೆದೆ. ಅದರ ಜೊತೆ ಆಟ ಆಡುತ್ತಿದ್ದೆ. ಅದನ್ನು ಬಿಟ್ಟರೆ ನಟನೆ– ಬಣ್ಣ ಯಾವುದಕ್ಕೂ ಅವಕಾಶ ಇರಲಿಲ್ಲ. ಪದವೀಧರಳಾದ ಮೇಲೆ ಸಂಪೂರ್ಣ ಸ್ವತಂತ್ರ ನೀಡಿದರು. ಹಾಗಾಗಿ ಬೇರೆ ಬೇರೆ ಕೆಲಸ ಮಾಡುತ್ತಿದ್ದೇನೆ. ಸಾಫ್ಟ್‌ವೇರ್ ಕಂಪನಿ ಬಿಡುವಾಗ ಕೂಡ ತಮ್ಮ ಪೋಷಕರು ಸಮ್ಮತಿ ಸೂಚಿಸಿದ್ದಾರೆ.

■ **ರಾಘವೇಂದ್ರ ಕೆ.**